**AKSHARASURYA** Peer-Reviewed Multi Lingual Journal
Volume – 01, Issue – 01, October 2022.

# ಚುಟುಕುಗಳ ಇತಿಹಾಸ.

**ಗಿರೀಶ ಎಂ.**
ಮಜಕ್ಕಾರು ಮನೆ, ಮಲ್ಲ ಅಂಚೆ, ಕಾಸರಗೋಡು 671 542.
6282741097
gireeshaacharyamajakkar@gmail.com

"ಚುಟುಕು ಕಾವ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಶಿಲಾಲಿಪಿಗಳಲ್ಲಿ ವಚನಗಳಲ್ಲಿ ಶರಣರು, ದಾಸರ ನಂತರದಲ್ಲಿ ತ್ರಿಪದಿಯ ಸರ್ವಜ್ಞ ಮೇರು ಚುಟುಕು ಸಾಹಿತ್ಯವನ್ನು ರಚಿಸಿದ್ದಾರೆ. ಆಧುನಿಕ ಸಾಹಿತ್ಯದಲ್ಲಿ ಕುವೆಂಪು, ಯು.ಆರ್ ಅನಂತ ಮೂರ್ತಿ, ಸಿ.ಪಿ.ಕೃಷ್ಣಕುಮಾರ್, ಡುಂಡಿರಾಜ್, ಅಕ್ಬರ್ ಆಲಿ ಒಳಗೊಂಡಂತೆ ಹಲವಾರು ಕವಿಗಳು ಅದ್ಭುತವಾದ ಚುಟುಕು ಸಾಹಿತ್ಯ ರಚಿಸುವ ಮೂಲಕ ಕನ್ನಡ ಸಾಹಿತ್ಯದ ಸತ್ವವನ್ನು ಗಟ್ಟಿ ಗೊಳಿಸಿದ್ದಾರೆ. ಮಹತ್ವವಾದ ವಿಚಾರಗಳನ್ನು ಅತಿ ಕಡಿಮೆ ಸಾಲುಗಳಲ್ಲಿ ಹೇಳುವುದೇ ಚುಟುಕು ಸಾಹಿತ್ಯದ ಲಕ್ಷಣ. ಇದು ಕಾವ್ಯದ ಯಾವುದೇ ಪ್ರಕಾರಕ್ಕೆ ಕಡಿಮೆ ಯಾಗದೆ, ಜೀವನ ಮೌಲ್ಯಗಳನ್ನು ಅರ್ಥ ಪೂರ್ಣವಾಗಿ ಪ್ರತಿಪಾದಿಸುವ ಚುಟುಕು ಸಾಹಿತ್ಯದ ಹಾದಿಯು ಶ್ರೇಷ್ಠತೆಯಿಂದ ಕೂಡಿದೆ"[1] ಎಂದು ಕನ್ನಡ ಸಾಹಿತ್ಯದ ಪರಿಷತ್‌ನ 10ನೇ ಚುಟುಕು ಸಾಹಿತ್ಯದ ಸಮ್ಮೇಳನದಲ್ಲಿ ನಿವೃತ ಐ.ಎ.ಎಸ್. ಅಧಿಕಾರಿ ಡಾ.ಮನು ಬಿಳಿಗಾರ್ ಹೇಳಿರುವ ಮಾತುಗಳು ಚುಟುಕು ಸಾಹಿತ್ಯದ ಅನೇಕ ಅಂಶಗಳನ್ನು ಬೆಳಕಿಗೆ ತರುತ್ತದೆ.

"ಚುಟುಕು" ಎಂಬ ಪ್ರಕಾರ ಕೇವಲ ಕನ್ನಡ ಸಾಹಿತ್ಯದಲ್ಲಿ ಮಾತ್ರ ಕಂಡು ಬರುವುದೇ, ಇತರ ಭಾಷೆಗಳಲ್ಲಿ "ಚುಟುಕು" ಗಳಿವೆಯೆ? ಅಥವಾ ಸಾಮ್ಯತೆಯ ಪ್ರಕಾರಗಳಿವೆಯೇ ಎಂಬುವುದನ್ನು ಚಿಂತಿಸಬೇಕಾಗಿದೆ. ಯಾಕೆಂದರೆ ಕನ್ನಡ ಸಾಹಿತ್ಯದ "ವಚನ" ಸಾಹಿತ್ಯ ಎಂಬ ಪ್ರಕಾರವು ಕನ್ನಡದ ವಿಶಿಷ್ಟ ಪ್ರಕಾರವಾಗಿದ್ದು, ವಿಶ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಕೊಡುಗೆ ಎಂಬ ಹೆಗ್ಗಳಿಕೆಗೆ ಪಾತ್ರವಾದುದು ಎಂಬ ಕೀರ್ತಿ ವಚನ ಸಾಹಿತ್ಯದ್ದಾಗಿದೆ. ಹೀಗಿರುವಾಗ "ಚುಟುಕು" ಬೇರೆ ಭಾಷೆಯಲ್ಲಿದೆಯೋ? ಎಂಬ ವಿಚಾರವನ್ನು ವಿಶ್ಲೇಷಿಸುತ್ತ ಮುನ್ನಡೆದಾಗ ಹಲವು ವಿಚಾರಗಳು ಗಮನಕ್ಕೆ ಬರುತ್ತದೆ. ಚುಟುಕು ಸಾಹಿತ್ಯ ದ ಉಗಮದ ಬಗ್ಗೆ ವಿದ್ವಾಂಸರು ಅನೇಕ ರೀತಿಯಲ್ಲಿ ವಾದವನ್ನು ಮಂಡಿಸಿದ್ದಾರೆ. ಆದರೆ ಚುಟುಕು ಸಾಹಿತ್ಯದ ಉಗಮದ ಕುರಿತಾಗಿ ಎಚ್.ಡುಂಡಿರಾಜರು ತಮ್ಮ "ಹನಿಗವನ ಏನು? ಏಕೆ? ಹೇಗೆ?" ಎಂಬ ಕೃತಿಯಲ್ಲಿ ಚುಟುಕುಗಳು ಕಾವ್ಯದ ಪ್ರಕಾರವೇ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡು ಕೊಳ್ಳುತ್ತಾರೆ. "ಕನ್ನಡದಲ್ಲಿ ನವ್ಯ ಕಾವ್ಯದ ಉಬ್ಬರದ ದಿನಗಳಲ್ಲಿ ದೀರ್ಘವಾದದ್ದು ಮತ್ತು ಸಂಕೀರ್ಣ ವಾದದ್ದು ಮಾತ್ರ ಶ್ರೇಷ್ಠ ಕಾವ್ಯ ಎಂಬ ಅಭಿಪ್ರಾಯವಿತ್ತು. ಆಗ ಕೊಂಚ ಹಿನ್ನೆಲೆಗೆ ಸರಿದಿದ್ದ ಚಿಕ್ಕ ಕವನಗಳು ನವ್ಯೋತ್ತರ ಕಾವ್ಯದ ಸಂದರ್ಭದಲ್ಲಿ ಹನಿಗವನ/ ಚುಟುಕು ಹೆಸರಿನಲ್ಲಿ ಪುನಃ ಚಾಲ್ತಿಗೆ ಬಂದವು. ಹೀಗಾಗಿ ಕೆಲವರು ಅದೊಂದು ಹೊಸ ಕಾವ್ಯ ಪ್ರಕಾರ ಎಂದು ಭಾವಿಸಿದ್ದಾರೆ. ಗ್ರೀಕ್, ಲ್ಯಾಟಿನ್, ಸಂಸ್ಕೃತ, ಇಂಗ್ಲೀಷ್ ಮುಂತಾದ ವಿಶ್ವದ ಪ್ರಮುಖ ಭಾಷೆಗಳಲ್ಲಿ ಕಿರುಗವನಗಳಿಗೆ ಸುದೀರ್ಘ ಪರಂಪರೆ ಇದೆ. ಬಿಡಿಬಿಡಿಯಾಗಿ ನೋಡಿದರೆ ವೇದೋಪನಿಷತ್ತು ಗಳಲೂ್ಲ ಚಿಕ್ಕ ಚಿಕ್ಕ ಸ್ವತಂತ್ರವಾಗಿ ಓದಿಕೊಳ್ಳಬಹುದಾದ ಶ್ಲೋಕಗಳಿವೆ. ಕನ್ನಡದಲ್ಲೂ ಕಿರುಗವನಗಳ ಇತಿಹಾಸವನ್ನು 7ನೇ ಶತಮಾನದ್ದೆಂದು ಭಾವಿಸಲಾಗಿರುವ ಬಾದಾಮಿಯ ಕಪ್ಪೆ ಅರೆಭಟ್ಟನ ಶಾಸನದಲ್ಲಿ ಸಿಗುವ

ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯನ್
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾದವನೀತನ್ ಪೆರನಲ್ಲ.

[1]ಕನ್ನಡ ಸಾಹಿತ್ಯ ಪರಿಷತ್‌ನ ಹತ್ತನೇ ಚುಟುಕು ಸಾಹಿತ್ಯದಲ್ಲಿ ನಿವೃತ್ತ ಐ.ಎ.ಎಸ್. ಅಧಿಕಾರಿ ಡಾ.ಮನು ಬಿಳಿಗಾರರ ಮಾತು

ಎಂಬ ತ್ರಿಪದಿಯಿಂದ ಆರಂಭಿಸುತ್ತಾರೆ"[2] ಎಂಬ ವ್ಯಕ್ತಪಡಿಸುತ್ತಾರೆ. ಈ ಅಭಿಪ್ರಾಯವನ್ನು "ಹನಿಗವನಗಳ ಹೆಜ್ಜೆ ಹಿಡಿದು ಎಂಬ ಲೇಖನದಲ್ಲಿ ಕೇಶವ ಕುಲಕರ್ಣಿಯವರು ಬಾದಾಮಿ ಶಾಸನದ ಈ ಸಾಲುಗಳೇ ಚುಟುಕುಗಳ ಮಾದರಿ ಎಂಬುವುದನ್ನು ಸಮರ್ಥಿಸುತ್ತಾರೆ. ಮುಂದುವರಿದು ಕೇಶವ ಕುಲಕರ್ಣಿಯವರು ಕನ್ನಡದ ಕಂದ ಪದ್ಯಗಳು ಕೂಡ ಚುಟುಕು, ಹನಿಗವನದ ಸಾಮ್ಯತೆಯನ್ನು ಹೋಲುತ್ತವೆ. ಮಾತ್ರವಲ್ಲದೆ ಹನಿಗವನಗಳ ಮೂಲ ರೂಪದಂತೆ ಕಂಡುಬರುತ್ತದೆ. ಕನ್ನಡದಲ್ಲಿ ನಮಗೆ ದೊರತಿರುವಂಥಹ ಮೊಟ್ಟ ಮೊದಲ ಕೃತಿ "ಕವಿರಾಜ ಮಾರ್ಗ"ದಲ್ಲಿ ಕಂದಪದ್ಯಗಳು ಕೂಡ ಚುಟುಕಿನ ಮಾದರಿಯಂತೆ ಹೋಲುತ್ತದೆ ಎಂಬ ಅಭಿಪ್ರಾಯವನ್ನು ಕೇಶವ ಕುಲಕರ್ಣಿಯವರು ಪಡುತ್ತಾರೆ. ಮಾತ್ರವಲ್ಲದೆ ಚುಟುಕುಗಳ ಮೂಲದ ಬಗ್ಗೆ ಅರಿವು ಮೂಡಿಸಲು "ಕನ್ನಡ ಜನಪದ ತ್ರಿಪದಿಗಳು ಕನ್ನಡ ಸಾಹಿತ್ಯದ ಸುಂದರ ಹನಿಗವನಗಳ / ಚುಟುಕುಗಳ ತವರು" ಎಂಬುದಾಗಿ ತಿಳಿಸಿ ಉದಾಹರಣೆಯ ಮೂಲಕ ಸಮರ್ಥಿಸಿ ಕೊಳ್ಳುತ್ತಾರೆ.

ಕೂಸು ಇದ್ದ ಮನಿಗೆ ಬೀಸಣಿಗ ಯಾತಕ
ಕೂಸು ಕಂದವ್ವ ಒಳ ಹೊರಗ ಆಡಿದರ
ಬೀಸಣಿಗಿ ಗಾಳಿ ಸುಳಿದಾವ.[3]

ಈ ಅಭಿಪ್ರಾಯಗಳು ಚುಟುಕು ಸಾಹಿತ್ಯಕ್ಕೂ ತ್ರಿಪದಿಗಳಿಗೂ ಹೋಲಿಕೆ ಕಂಡು ಬರುತ್ತದೆ. ಯಾಕೆಂದರೆ ಚುಟುಕುಗಳು ಕೂಡ ಚಿಕ್ಕದಾಗಿ ಚೊಕ್ಕದಾದ ಸಂದೇಶವನ್ನು ಕೊಡುವ ಅಪರೂಪದ ಸಾಹಿತ್ಯ. ಹೀಗೆ ನೋಡಿದರೆ ತ್ರಿಪದಿಗಳು ಕೂಡ ಗಾತ್ರದಲ್ಲಿ ಚಿಕ್ಕದಾಗಿದ್ದು ಜನತೆಯನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯ ಲು ಅನೇಕ ರೀತಿಯ ಅರ್ಥಗಳಿಂದ ಜನತೆಯನ್ನು ಎಚ್ಚರಿಸುತ್ತದೆ. ತ್ರಿಪದಿಗಳು ಮಾನವೀಯ ಮೌಲ್ಯಗಳ ನ್ನು ಪದಗಳಲ್ಲಿ ಹೆಣೆದು ಕಟ್ಟಿರುವ 3 ಸಾಲಿನ ಜನವಾಣಿಯಾಗಿದೆ. ಹೀಗೆ ನೋಡಿದರೆ ತ್ರಿಪದಿಯು ಒಂದು ಅರ್ಥದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಿರ ಪರಿಚಿತವಾಗಿರುವ ಚುಟುಕಿನ ನಿರ್ಮಾಣಕ್ಕೆ ಒಂದು ತಳಪಾಯವನ್ನು ಹಾಕಿ ಕೊಟ್ಟ ಕನ್ನಡದ ಬಗೆ ಬಗೆಯ ಸಾಹಿತಿಕ ಪ್ರಕಾರದಲ್ಲಿ ಒಂದು ಎಂಬ ನಿಗಮನಕ್ಕೆ ಬರಬಹುದು.

ಬೆಚ್ಚನ ಮನೆಯಿರಲು ವೆಚ್ಚಕ್ಕೆ ಹೊನ್ನಿರಲು
ಇಚ್ಚೆಯನರಿವ ಸತಿಯಿರಲು
ಸ್ವರ್ಗಕ್ಕೆ ಕಿಚ್ಚು ಹೆಚ್ಚೆಂದ ಸರ್ವಜ್ಞ*[4]

ಎಂಬ ಸರ್ವಜ್ಞನ ಸಾಲುಗಳು ಚುಟುಕುಗಳ ನಿರ್ಮಾಣಕ್ಕೆ ಒಂದು ಮಾರ್ಗವನ್ನು ಒದಗಿಸುತ್ತದೆ. ಚುಟುಕು ಸಾಹಿತಿಗಳು ಚುಟುಕುಗಳನ್ನು ಬರೆಯುವ ಮೊದಲು ಕನ್ನಡ ಸಾಹಿತ್ಯದ ಕೆಲವು ಅಂಶಗಳನ್ನಾದರು ಬಲ್ಲವರಾಗಿರುತ್ತಾರೆ. ಯಾಕೆಂದರೆ ಚುಟುಕು ನಿರ್ಮಾಣಕ್ಕೆ ಅರಿವು ಮೂಡಿಸಲು ಸಾಹಿತ್ಯ ಆಸಕ್ತಿ ಬೇಕಾಗಿರುತ್ತದೆ. ದಿನಕರ ದೇಸಾಯಿಯವರ ಚುಟುಕ್ಕೊಂದು; ತ್ರಿಪದಿಗಳಿಂದಲೇ ಕನ್ನಡದಲ್ಲಿ ಚುಟುಕು ನಿರ್ಮಾಣಕ್ಕೆ ನಾಂದಿಯಾಯಿತ್ತು. ಎಂಬ ಮಾತನ್ನು ಚುಟುಕಿನಲ್ಲಿ ನಿರೂಪಿಸಿದ್ದಾರೆ.

ಸರ್ವಜ್ಞ ಕವಿ, ನೀನು ಮೂಡಿಸಿದ ತ್ರಿಪದಿ
ನನ್ನ ಚೌಪದಿಗಳಿಗೆ ತೋರಿಸಿತು ಹಾದಿ
ನಿನ್ನ ಮಾತಿನ ಸೊಗಸು ಬರಲಿಲ್ಲ ನನಗೆ
ನೀನೊಬ್ಬನೇ ಸಾರ್ವ ಭೌಮ ಇದುವರೆಗೆ *[5]

ಎಂಬ ಸತ್ಯವನ್ನು ಹೊರ ಹಾಕಿರುವ ರೀತಿಯಿಂದಲೇ ಚುಟುಕಿನ ಪ್ರಾರಂಭಕ್ಕೆ ತ್ರಿಪದಿಗಳು ಕಾರಣವಾಗಿದೆ ಎಂಬ ಮಾತು

---

[2] ಹನಿಗವನ ಏನು? ಏಕೆ? ಏಕೆ?, ಎಚ್. ಡುಂಡಿರಾಜ್ ಪುಟಸಂಖ್ಯೆ–21
[3] ಅನಿವಾಸಿ– ಯು.ಕೆ ಕನ್ನಡಿಗರ ತಂಗುದಾಣ– ಹನಿಗವನಗಳ ಹೆಜ್ಜೆ ಹಿಡಿದು (ಲೇಖನ)– ಕೇಶವ ಕುಲಕರ್ಣಿ
[4] ಅನಿವಾಸಿ– ಯು.ಕೆ ಕನ್ನಡಿಗರ ತಂಗುದಾಣ– ಹನಿಗವನಗಳ ಹೆಜ್ಜೆ ಹಿಡಿದು (ಲೇಖನ)– ಕೇಶವ ಕುಲಕರ್ಣಿ
[5] ದಿನಕರ ದೇಸಾಯಿಯವರ ಆಯ್ದ ಕವಿತೆಗಳು– ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 212

ಸಹಜವೆನಿಸುತ್ತದೆ. ಇಲ್ಲಿ ದಿನಕರ ದೇಸಾಯಿಯವರು ಚೌಪದಿ ಎಂದು ಕರೆದಿರುವುದು ಚುಟುಕುಗಳನ್ನೇಯಾಗಿದೆ. ಚುಟುಕನ್ನು ಕವಿಗಳು ಬೇರೆ ಬೇರೆ ರೀತಿಯಲ್ಲಿ ಕರೆದಿದ್ದಾರೆ. ದಿನಕರ ದೇಸಾಯಿಯವರ 4 ಸಾಲಿನ ಚುಟುಕನ್ನು ಚೌಪದಿ ಎಂದು ಕರೆದರೆ; ಸಿ.ಪಿ.ಕೆಯವರು ಹನಿಗವನ ಎಂದು ಕರೆಯಲು ಇಷ್ಟ ಪಡುತ್ತಾರೆ ಎಂಬುವುದನ್ನು ಸಾಹಿತ್ಯಮೊದ ಕೃತಿಯಲ್ಲಿ ಪ್ರೊ.ಕೆ.ಆರ್.ಪ್ರೇಮಲೀಲಾ ಅವರು ಉಲ್ಲೇಖಿಸಿದ್ದಾರೆ.

ಯಾವುದೇ ಒಂದು ಕಾರ್ಯದ ನಿರ್ಮಾಣದ ಹಿಂದೆ ಅನೇಕ ವಿಷಯಗಳ ಪ್ರಭಾವಿರುತ್ತದೆ. ಹಾಗೆಯೇ ಇಂದು ನಾವು ಕಾಣುವ ಈ ಚುಟುಕಿನ ನಿರ್ಮಾಣದ ಹಿಂದೆ ಅನೇಕ ಸಾಹಿತ್ಯದ ಪ್ರಕಾರಗಳ ಪ್ರಭಾವವಿದೆ. ಕೆಲವರು ಸರ್ವಜ್ಞನ ತ್ರಿಪದಿಗಳಿಂದ ಪ್ರಭಾವಿತರಾದರೆ, ಇನ್ನು ಕೆಲವರು ವಚನ, ಕೀರ್ತನೆಗಳಿಂದ ಪ್ರಭಾವಿತರಾಗಿದ್ದಾರೆ. ಚುಟುಕಿನ ನಿರ್ಮಾಣದ ಹಿಂದೆ ಜನಪದ ಸಾಹಿತ್ಯದ ಕೊಡುಗೆಯನ್ನು ನಾವು ಮರೆಯುವಂತಿಲ್ಲ.

12ನೇ ಶತಮಾನದ ಕಾಲದಲ್ಲಿ ಕನ್ನಡನಾಡಿನಲ್ಲಿ ಜನವಾಣಿಯಂತೆ ಕಂಡು ಬಂದ ವಚನ ಸಾಹಿತ್ಯದ ಶೈಲಿಯನ್ನು ಗಮನಿಸಿದ್ದಾಗ ಅದು ಚುಟುಕಿನ ನಿರ್ಮಾಣಕ್ಕೂ ಸಹಕರಿಸಿದೆ. ವಿಶ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಸ್ವತಂತ್ರ ಕೊಡುಗೆ ಎಂದು ಕರೆಯಲ್ಪಡುವ ವಚನಗಳು ಚುಟುಕುಗಳ ಮಾದರಿಯನ್ನು ಹೋಲುತ್ತದೆ. ಶಿವಶರಣರ ಯುಗದಲ್ಲಿ ಕಂಡುಬರುವ ಶ್ರೇಷ್ಠ ವಚನಕಾರರಾದ ಬಸವಣ್ಣನವರು ಜೀವನ ಸಾರವನ್ನು ವಚನಗಳ ಮೂಲಕ ತಿಳಿ ಹೇಳಿದ ರೀತಿ ವಿನೂತನವಾದುದು. ಈ ವಿನೂತನ ಶೈಲಿಯು ಚುಟುಕಿನ ಮೊದಲ ರೂಪದಂತೆ ಕಂಡುಬರುತ್ತದೆ ಎಂಬ ಅಂಶಗಳನ್ನು ಡುಂಡಿರಾಜ್ ಅವರು "ಹನಿ ಗವನ ಏನು? ಏಕೆ? ಹೀಗೆ?" ಎಂಬ ಕೃತಿಯಲ್ಲಿ ವಚನ ಸಾಹಿತ್ಯವು ಚುಟುಕಿನ ನಿರ್ಮಾಣಕ್ಕೆ ನಾಂದಿ ಹಾಡಿದೆ ಎಂಬ ಮಾತನ್ನು ಉಲ್ಲೇಖಿಸಿದ್ದಾರೆ. ಹಾಗೆಯೇ ಪ್ರೊ. ಕೆ. ಆರ್. ಪ್ರೇಮಲೀಲಾ ಅವರು "ಸಾಹಿತ್ಯಮೊದ" ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.

ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡ ಬೇಡ
ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ

ಎಂದು ಜೀವನಸಾರವನ್ನು ಚುಟುಕಾಗಿ ಹೇಳಿದ ಬಸವಣ್ಣರ ವಚನಗಳು ಜನಮಾನಸದಲ್ಲಿ ಮಾನವೀಯ ತೆಯ ಚಿಗುರು ಮೂಡಿಸಲು ಕಾರಣಿಕರ್ತರಾದರು. ಯಾಕೆ ಜನಸಾಮಾನ್ಯರಿಗೂ ಈ ವಚನಗಳ ಮಹತ್ವ ಅರಿವಾಯಿತೆಂದರೆ, ಈ ವಚನಗಳು ಸರಳವಾಗಿದ್ದು; ಜನ ಸಾಮಾನ್ಯರ ಭಾಷೆಯಲ್ಲಿದ್ದು ಮಾತ್ರವಲ್ಲದೆ ಚುಟುಕಾಗಿತ್ತು. ಈ ಕಾರಣದಿಂದಲೇ ಜನಸಾಮಾನ್ಯರ ಮನಪರಿವರ್ತನೆಗೊಳ್ಳಲು ಬಸವಣ್ಣನವರಿಗೆ ಸಾಧ್ಯ ವಾದುದು. ಈ ವಚನ ಕೇವಲ 12ನೇ ಶತಮಾನಕ್ಕೆ ಸೀಮಿತವಾಗಿಲ್ಲ. ಬದಲಾಗಿ ಪ್ರಸ್ತುತ ಸಮಾಜ ನಿರ್ಮಾಣಕ್ಕೆ ಅನ್ವಯ ವಾಗುತ್ತದೆ. ಈ ಕಾರಣದಿಂದಲೇ ವಚನ ಸಾಹಿತ್ಯದ ಪ್ರಭಾವ ಚುಟುಕು ಸಾಹಿತ್ಯದ ಮೇಲೆ ಬೀರಿದೆ. ವಚನ ಸಾಹಿತ್ಯದ ಮೇರು ಗುಣವೇ ಅನುಭಾವಿಕ ಮಾತುಗಾಗಿವೆ. ಹೀಗಾಗಿ ವಚನಕಾರರು ನುಡಿದ್ದಂತೆ ನಡೆದರು, ನಡೆದ್ದಂತೆ ನುಡಿದರು. ಇದು ಚುಟುಕು ಸಾಹಿತ್ಯಕ್ಕೆ ಉತ್ತಮಾಂಶವಾಗಿ ಪರಿಣಮಿಸಿತು.

ದಿನಕರ ದೇಸಾಯಿಯವರ ಒಂದು ಚುಟುಕು ಈ ಮಾದರಿಯಲ್ಲಿದೆ.

ಅನುಭವದ ಹೊರಗೆ ನಾ ಬರೆಯಲಿಲ್ಲಣ್ಣ
ಹಚ್ಚಲಿಲ್ಲವೋ ಮತ್ತೆ ಯಾವುದೂ ಬಣ್ಣ
ಬರೆದದ್ದು ನುಡಿದದ್ದು ಎಲ್ಲವೂ ಸಾದಾ

ಹೀಗಾಗಿ ಮನದೊಳಗೆ ಹೋಗುವುದು ಸೀದಾ *[6]

12ನೇ ಶತಮಾನದಲ್ಲಿ ಮಾರ್ಗ ಶೈಲಿಯನ್ನು ಬಿಟಿಗೂ ದೇಸಿಯತೆಗೆ ಮಹತ್ವ ಕೊಟ್ಟು ಅನುಭವದ ಮಾತುಗಳ ಮೂಲಕ ವಚನಕಾರರು ಜನಸಾಮಾನ್ಯರಿಗೆ ವಚನಗಳನ್ನು ತಲುಪಿಸುವ ಪ್ರಯತ್ನ ಮಾಡಿದರು. ಆಧುನಿಕ ಸಾಹಿತ್ಯದಲ್ಲಿ ಚುಟುಕು ಕವಿಗಳು ಕೂಡ ಅಂತಹ ಪ್ರಯತ್ನಕ್ಕೆ ಮುಂದಾಗಿ ಜನಪ್ರಿಯತೆ ಗಳಿಸಿದರು.

ದಿನಕರ ದೇಸಾಯಿಯವರು ಬಸವಣ್ಣನವರ ವಚನಗಳಿಂದ ಮಾತ್ರ ಪ್ರಭಾವಿತರಾಗದೆ ಅಕ್ಕ ಮಹಾದೇವಿಯ ವಚನಗಳ ಪ್ರಭಾವಕ್ಕೆ ಒಳಗಾಗಿದ್ದಾರೆ. ಅದಕ್ಕೆ ತಕ್ಕ ಸಾಕ್ಷಿಯಂತೆ ತೋರುತ್ತದೆ ಈ ಚುಟುಕು.

ನೀವೆಲ್ಲ ಕಾಣಿರೆ ಚಿಲಿಪಿಲಿಯ ಹಕ್ಕಿ?
ಯಾವ ಸೆಟ್ಟಿಯ ಚೀಲದೊಳಗುಂಟು ಅಕ್ಕಿ?
ದುಂಬಿಗಳಿರಾ, ನೀವು ಕಾಣಿರೇ? ಹೇಳಿ
ಸಕ್ಕರೆಯ ನುಂಗಿದಳೆ ಆ ಮಹಾಕಾಳಿ? *[7]

ಎಂಬ ಚುಟುಕು ಅಕ್ಕ ಮಹಾದೇವಿಯ "ಚೆನ್ನಮಲ್ಲಿಕಾರ್ಜುನ ದೇವನನ್ನು ನೀವು ಕಂಡಿರೇ?" ಎಂದು ವಚನದ ಮೂಲಕ ನಿರೂಪಿಸುವ ಹಾಗೆ ಇದೆ, ದಿನಕರ ದೇಸಾಯಿಯವರ ಈ ಚುಟುಕು.

ಹೀಗೆ ವಚನ ಸಾಹಿತ್ಯದಿಂದಲೂ ಚುಟುಕು ನಿರ್ಮಾಣಕ್ಕೆ ಸಹಕಾರಿಯಾಗಿದೆ. ವಚನ ಸಾಹಿತ್ಯವು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಸ್ಥಿತಿಗಳನ್ನು ಪ್ರಶ್ನಿಸಿದರೆ, ಚುಟುಕುಗಳು ಇಂದಿನ ರಾಜಕೀಯ ಕ್ಷೇತ್ರವನ್ನು ಮಾತ್ರವಲ್ಲದೆ ಸಾಮಾಜಿಕ ಕ್ಷೇತ್ರವನ್ನು ಸೇರಿದ್ದಂತೆ ಮಾನವನ ಮಿತಿಮೀರಿದ ಹೀನಾಯ ನಡತೆಗಳನ್ನು ವಿಡಂಭಿಸುತ್ತಾ, ವಂಗ್ಯ, ಹಾಸ್ಯದೊಂದಿಗೆ ಚುಚ್ಚುಮದ್ದಿನಂತೆ ಚುಟುಕುಗಳು ರಚನೆಯಾಗುತ್ತಿದೆ. ಚುಟುಕು ಸಾಹಿತ್ಯದ ಇತಿಹಾಸವನ್ನು ಪರಿಶೀಲಿಸುತ್ತ ಹೋದಂತೆ ಚುಟುಕು ಸಾಹಿತ್ಯದ ಉಗಮಕ್ಕೆ ಸಾಹಿತ್ಯ ಕ್ಷೇತ್ರದ ಇನ್ನೊಂದು ಅಂಶವಾದ ಕೀರ್ತನೆಗಳು ಕೂಡ ಕಾರ್ಯ ನಿರ್ವಹಿಸಿದೆ ಎಂಬ ವಿಷಯಕ್ಕೆ ಆಧಾರಗಳು ಲಭಿಸುತ್ತದೆ. ವೈಷ್ಣವ ಪಂಥದ ದಾಸರು ಕೀರ್ತನೆಗಳನ್ನು ಹಾಡುವುದರ ಜೊತೆಗೆ ಉಗಭೋಗಗಳೆಂಬ ಸಣ್ಣ ಹಾಡುಗಳನ್ನು ಬರೆದಿರುವುದನ್ನು ಕಾಣಬಹುದು. ಈ ಉಗಭೋಗ ಗಳು ಒಂದು ದೃಷ್ಟಿಯಲ್ಲಿ

ಇಂದಿನ ದಿನವೇ ಶುಭದಿನ
ಇಂದಿನ ವಾರ ಶುಭವಾರ
ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ
ಇಂದು ಪುರಂದರ ವಿಠಲರಾಯನ
ಸಂದರ್ಶನ ಫಲವೆಮಗಾಯಿತು! *[8]

ಎಂದು ಚುಟುಕಾಗಿ ಬರೆದಿರುವ ಅಥವಾ ಹಾಡಿರುವ ಉಗಾಭೋಗಗಳು ಚುಟುಕಿನ ಮೂಲ ರೂಪದಂತೆ ಕಂಡು ಬರುತ್ತದೆ. ಶಿವದಾಸ ಗೀತಾಂಜಲಿ ಕೃತಿಯನ್ನು ಸಂಪಾದಿಸಿರುವ ಎಲ್. ಬಸವ ರಾಜು ರವರು ಒಂದು ಮಾತನ್ನು ಉಲ್ಲೇಖಿಸುತ್ತಾರೆ. "ಕೀರ್ತನೆಗಳಿಗೆ ಹರಿದಾಸರೇ ಮೊದಲಿಗರಲ್ಲ. ಕೀರ್ತನೆಗಳ ಲಕ್ಷಣಕ್ಕೆ ಹೊಂದಿಕೊಳ್ಳುವಂಥ ರಚನೆಗಳು 12ನೇ ಶತಮಾನದ ಶಿವದಾಸರಲ್ಲಿ ಕಾಣುತ್ತೇವೆ"*[9] ಎಂಬ ಉಲ್ಲೇಖವಾಗಿರುವ ಮಾತನ್ನು ಒಂದು ದೃಷ್ಟಿಕೋನದಲ್ಲಿಟ್ಟು ಚುಟುಕು ಸಾಹಿತ್ಯವನ್ನು

[6] ದಿನಕರ ದೇಸಾಯಿಯವರ ಆಯ್ದ ಕವಿತೆಗಳು– ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 192

[7] ದಿನಕರ ದೇಸಾಯಿಯವರ ಆಯ್ದ ಕವಿತೆಗಳು– ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 196

[8] ಅನಿವಾಸಿ– ಯು.ಕೆ ಕನ್ನಡಿಗರ ತಂಗುದಾಣ– ಹನಿಗವನಗಳ ಹೆಜ್ಜೆ ಹಿಡಿದು (ಲೇಖನ)– ಕೇಶವ ಕುಲಕರ್ಣಿ

[9] ಶಿವದಾಸ ಗೀತಾಂಜಲಿ– ಎಲ್.ಬಸವರಾಜ್

ನೋಡಿದ ರೆ ಚುಟುಕಿನ ಪ್ರಮುಖ ಲಕ್ಷಣಗಳು ವಚನ, ಕೀರ್ತನೆ ಹಾಗೂ ತ್ರಿಪದಿಯಲ್ಲಿ ಕಂಡು ಬರುತ್ತದೆ. ಹಾಗಿದ್ದರೆ ಈ ಎಲ್ಲಾ ಸಾಹಿತಿಕ ಪ್ರಕಾರಗಳ ಮಿಶ್ರಣವಾಗಿ ಚುಟುಕು ಕಂಡು ಬರುತ್ತದೆಯೇ? ಎಂಬ ಮಾತು ಮೂಡುತ್ತದೆ. ಈ ಮಾತನ್ನು ಅನ್ವೇಷಣೆ ಮಾಡಿದಾಗಲೇ ಚುಟುಕು ಸಾಹಿತ್ಯದ ಪ್ರಾಚೀನ ಇತಿಹಾಸ ಅರಿವಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಚುಟುಕಿನ ಉಗಮಕ್ಕೆ ಸಂಬಂಧಿಸಿದಂತೆ ಅನ್ವೇಷಣೆ ನಡೆಸಿದಾಗ ವಚನ, ತ್ರಿಪದಿ ಹಾಗೂ ಉಗಾಭೋಗಗಳಲ್ಲಿರುವ ಪ್ರಧಾನ ಲಕ್ಷಣಗಳನ್ನು ಚುಟುಕು ಸಾಹಿತ್ಯದಲ್ಲಿ ಕಾಣುತ್ತೇವೆ. ಹೀಗಿದ್ದರೆ ಚುಟುಕು ಸಾಹಿತ್ಯದ ಮಾದರಿಗಳು ಕೇವಲ ಕನ್ನಡ ಭಾಷೆಗೆ ಸೀಮಿತವಾಗಿದೆಯೇ? ಇಲ್ಲವೇ? ಎಂಬ ವಿಷಯದ ಕುರಿತು ಪ್ರಶ್ನೆಗಳು ಏಳುತ್ತವೆ. ಇದಕ್ಕೆ ಉತ್ತರಿಸಲು ಅವುಗಳ ಬಗ್ಗೆ ಕಿರಿದಾಗಿ ಅಧ್ಯಯನ ಮಾಡುವುದು ಯೋಗ್ಯವೆನಿಸುತ್ತದೆ. ಯಾಕೆಂದರೆ ಚುಟುಕಿನ ಮೂಲದ ಬಗ್ಗೆ ತಿಳಿದು ಕೊಳ್ಳುವುದರ ಜೊತೆಗೆ ಅನ್ಯ ಭಾಷೆಯ ಮೇಲೆ ಕಣ್ಣಾಡಿಸುವಂತೆ ಮಾಡಬಹುದಾಗಿದೆ.

**ಹೊಸಗನ್ನಡದಲ್ಲಿ ಚುಟುಕು ಸಾಹಿತ್ಯ**

ಚುಟುಕು ಮಾದರಿಯ ಪ್ರಕಾರಗಳು ಹಳೆಗನ್ನಡದ ಕಾವ್ಯಗಳಲ್ಲಿ ನಡುಗನ್ನಡದ ವಚನ, ಕಿರ್ತನೆ, ಷಟ್ಪದಿ, ಮುಂತಾದ ಪ್ರಕಾರಗಳಲ್ಲಿ ಮಾದರಿಯನ್ನು ಕಾಣಬಹುದಾಗಿದ್ದರೂ ಚುಟುಕು ಎಂಬ ಸಾಹಿತ್ಯ ಪ್ರಕಾರ ತನ್ನ ನಿಜವಾದ ಸ್ವರೂಪವನ್ನು ಗಳಿಸಿದ್ದು ಹೊಸಗನ್ನಡದಲ್ಲಾಗಿದೆ. ಜನರ ಜೀವನ ಶೈಲಿ ಬದಲಾದಂತೆ ಕಾವ್ಯದಲ್ಲೂ ಬದಲಾವಣೆಗಳು ಕಂಡು ಬಂದವು. ಚಂಪೂ ಸಾಹಿತ್ಯವು ಬರುಬರುತ್ತಾ ದೇಶಿಯತೆಗೆ ಮಹತ್ವ ಕೊಟ್ಟು ಅನಂತ ಇನ್ನು ಸರಳಗೊಂಡು ವಚನ, ಕಿರ್ತನೆಗಳಾಗಿ ಕಂಡು ಬಂದ ನಮ್ಮ ಕನ್ನಡ ಸಾಹಿತ್ಯದ ಕಾವ್ಯ ಪ್ರಕಾರಗಳು ಹೊಸಗನ್ನಡದಲ್ಲಿ ಅಂತಹ ಬದಲಾವಣೆಯೊಂದಿಗೆ ಮುನ್ನಡೆದ ಕಾಲವಾಗಿತ್ತು. ಆಧುನಿಕತೆಯ ಜಂಜಾಟದಲ್ಲಿ ಜನತೆ ಓದುವಿಕೆಗಾಗಿ ಸಮಯವನ್ನು ಮೀಸರಿಸಲು ಹಿಂದೆ ಮುಂದೆ ನೋಡ ತೊಡಗಿದರು. ಇಂತಹ ಸಂದರ್ಭದಲ್ಲಿ ಪ್ರಸ್ತುತ ಸಮಾಜದಲ್ಲಾಗುವ ತಲ್ಲಣಗಳನ್ನು ಸಣ್ಣ ಸಾಲುಗಳ ಮೂಲಕ ಜನತೆಯ ಮನಸ್ಸಿಗೆ ತರುವ ಪ್ರಯತ್ನ ಮಾಡಿರುವುದು ಚುಟುಕುಗಳಾಗಿವೆ.

ಬದುಕಿನ ಸ್ಥಿತಿಗತಿಗಳನ್ನೇ ವಿಷಯ/ವಸ್ತುಗಳನ್ನಾಗಿ ಕೆಲವರು ಚುಟುಕುಗಳನ್ನು ಬರೆದರೆ ಇನ್ನು ಕೆಲವರಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಮುಂತಾದ ಜನತೆಯೊಂದಿಗೆ ಒಂದಾದ ಕ್ಷೇತ್ರಗಳ ಬಗ್ಗೆ ಚುಟುಕುಗಳು ಬರೆಯಲ್ಪಟ್ಟವು. ಮಾತ್ರವಲ್ಲದೇ ತನ್ನ ಸರಳತೆಯೊಂದಿಗೆ ಮುನ್ನಡೆದ ಚುಟುಕು ಜನ ಸಮಾನ್ಯರನ್ನು ಸೆಳೆಯುವಲ್ಲಿ ಆಕರ್ಷಿತವಾದವು. ಕಳೆದ ಭಾಗದಲ್ಲಿ ನಾವು ಚುಟುಕಿಗೆ ಪ್ರೇರಣೆಯಾದ ಅಂಶ ಯಾವುದು? ಚುಟುಕಿನ ಮಾದರಿ ಹೋಲುವ ಇತರ ಭಾಷೆಗಳಲ್ಲಿ ಅಂತಹ ಮಾದರಿಗಳಿವೆಯೇ? ಎಂಬುವುದರ ಬಗ್ಗೆ ಅಧ್ಯಯನ ಮಾಡಲಾಗಿತ್ತು. ಇನ್ನು ಈ ಚುಟುಕು ಸಾಹಿತ್ಯವು ಆಧುನಿಕ ಕನ್ನಡದಲ್ಲಿ ಹೇಗಿದೆ?; ಅದು ಬೆಳೆಯಲು ಪೂರಕವಾದ ಅಂಶಗಳು ಯಾವುವು? ಚುಟುಕು ಯಾಕೆ ಪ್ರಸ್ತುತ ಸಮಾಜದ ಚಿತ್ರಣವನ್ನು ತೋರ್ಪಡಿಸುತ್ತದೆ? ಕಿರಿದಾಗಿ, ಅರ್ಥಗರ್ಭಿತವಾಗಿ ಬರೆದು ಜನರನ್ನು ಆಕರ್ಷಿಸುವಲ್ಲಿ ಕಾರಣವಾದ ಕೈಗಳು ಯಾವುವು? ಎಂಬುವುದರ ಬಗ್ಗೆ ಅಧ್ಯಯನ ನಡೆಸಬೇಕಾಗುತ್ತದೆ.

ಹೊಸಗನ್ನಡದಲ್ಲಿ ಜನಪ್ರಿಯತೆಯನ್ನು ಹೊಂದಿರುವ ಈ ಚುಟುಕು ಸಾಹಿತ್ಯವನ್ನು ಪ್ರಾರಂಭಿಸಿದ ಕವಿ ಎಂದು ದಿನಕರ ದೇಸಾಯಿಯವರನ್ನು ಕರೆಯಲಾಗುತ್ತದೆ. 10 ಸಾವಿರಕ್ಕೂ ಹೆಚ್ಚು ಚೌಪದಿ ಬರೆದಿರು ವ ಕನ್ನಡದ ಶ್ರೇಷ್ಠ ಕವಿ ಎಂದು ಪ್ರಖ್ಯಾತಿಯು ಇವರಿಗಿದೆ. ಮುಖ್ಯವಾಗಿ ಇವರು ರಾಜಕೀಯವನ್ನು ವಿಡಂಬನೆ ಮಾಡುತ್ತಾ ದಿನ ನಿತ್ಯದ ಆಗು ಹೋಗುಗಳಿಗೆ ನಾಲ್ಕು ಸಾಲಿನ ಪುಟ್ಟ ಪದ್ಯಗಳಲ್ಲಿ ಸಾಹಿತ್ಯವನ್ನು ಬರೆದು ವಿಡಂಬಿಸಿರುವುದನ್ನು ಕಾಣ ಬಹುದಾಗಿದೆ.

ಕಲ್ಲಿಗೂ ದೃಢವಾಗಿ ಮನುಜ ಸಂಕಲ್ಪ|
ಹೂವಾಗಿ ಅರಳಿದರೆ ಗೊಮ್ಮಟನ ಶಿಲ್ಪ|

ಉಕ್ತಿಗೂ ಬಿರುಸಾಗಿ ಮಾನವನ ಹೃದಯ।
ಬೆಣ್ಣೆಯೊಳು ಕರಗಿದರೆ ಗೌತಮನ ಉದಯ।*[10]

ಎಂಬ ವಿಷಯಗಳನ್ನು ನಾಲ್ಕು ಸಾಲಿಗೆ ಅಕ್ಷರದ ಮೂಲಕ ಇಳಿಸಿದ ರೀತಿ ಅದ್ಭುತವಾಗಿದೆ. ಈ ಸಾಲು ಗಳನ್ನು ಇಟ್ಟುಕೊಂಡು ಗಂಟೆಗಟ್ಟಲೆ ಮಾತನಾಡಬಹುದು. ಆದರೆ ಮಾತುಗಾರಿಕೆ ಸಂಕ್ಷಿಪ್ತಗೊಳಿಸಿ ಸರಳ ರೀತಿಯಲ್ಲಿ ಕ್ರೋಡೀಕರಿಸಿ, ಪ್ರಾಸದೊಂದಿಗೆ ಅಕ್ಷರಗಳ ಜೊತೆಗೆ ಸಂಬಂಧವನ್ನು ಬೆಸೆದು, ಪದ ಪದಗಳಲ್ಲಿ ಅರ್ಥ ವಿಶಾಲತೆಯನ್ನು ಮರೆದ ಚುಟುಕು ಸಾಹಿತಿಗಳ ಈ ಬರಹವು ವಿನೂತನವಾದುದು.

ಹೊಸಗನ್ನಡದಲ್ಲಿ ಮೊಟ್ಟ ಮೊದಲು ಚುಟುಕು ಸಾಹಿತ್ಯದ ಪುಸ್ತಕವನ್ನು ಹೊರ ತಂದವರು ಜಿ.ಪಿ.ರಾಜರತ್ನಂರವರು. 1940 ರಲ್ಲಿ ಪ್ರಕಟಗೊಂಡ "ನೂರು ಪುಟಾಣಿ" ಇದುವೇ ಕನ್ನಡದ ಪ್ರಪ್ರಥಮ ಹೊಸಗನ್ನಡ ಚುಟುಕು ಸಂಕಲನವಾಗಿ ಗುರುತಿಸಲ್ಪಡುತ್ತದೆ. ಹೊಸಗನ್ನಡದಲ್ಲಿ ಚುಟುಕ ಸಾಹಿತ್ಯವನ್ನು ಶ್ರೇಷ್ಠ ಮಟ್ಟಕ್ಕೆ ಕೊಂಡೊಯ್ಯುದ ಖ್ಯಾತಿ ದಿನಕರ ದೇಸಾಯಿ ಯವರಿಗೆ ಸಲ್ಲುತ್ತದೆ. ದಿನಕರ ದೇಸಾಯಿಯವರು ವಚನಗಳಿಂದ ಪ್ರೇರಣೆ ಪಡೆದು ಚುಟುಕುಗಳನ್ನು ಬರೆಯಲು ಪ್ರಾರಂಭಿಸಿದರು ಎಂಬುವುದಕ್ಕೆ ಅವರ ಈ ಚುಟುಕ್ಕೊಂದು ಹೇಳುತ್ತದೆ.

ನಾನು ಬರೆಯುವ ಚುಟುಕ ಹೊಸದಲ್ಲ, ಜಿಯ
ಸರ್ವಜ್ಞ ಸಂಪ್ರದಾಯದ ಕಹಿ ಕಷಾಯ
ಇದರ ಗರ್ಭದೊಳುಂಟು ನಾಕು ಶತಮಾನ
ಆಧುನಿಕವೆನಿಸಿದರು ಚುಟುಕ ಪ್ರಾಚೀನ *[11]

ಚುಟುಕು ಆಧುನಿಕ ಸಾಹಿತ್ಯದ ಪ್ರಕಾರ ಎಂದು ಕರೆಯಲ್ಪಟ್ಟಿದ್ದರೂ ದಿನಕರ ದೇಸಾಯಿಯವರು ಈ ಚುಟುಕಿಗೆ 4 ಶತಮಾನಗಳಷ್ಟು ಪ್ರಾಚೀನತೆ ಇದೆ. ಮಾತ್ರವಲ್ಲದೇ ಸರ್ವಜ್ಞರಾದಿಯಾಗಿ ಸರಳ ಶೈಲಿಯಲ್ಲಿ ಜನ ಸಾಮಾನ್ಯರಿಗೆ ತಿಳಿಸುವಂತಹ ಚುಟುಕು ಇತಿಹಾಸದ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲುತ್ತಾರೆ. ಹೀಗೆ ಪ್ರಾಚೀನತೆ ಇರುವ ಈ ಚುಟುಕು ಹೇಗೆ ಆಧುನಿಕತೆಯಲ್ಲಿ ಬದಲಾವಣೆಯೊಂದಿಗೆ ಮುನ್ನಡೆಯುತ್ತಿದೆ ಎಂಬುವುದಕ್ಕೆ ದಿನಕರ ದೇಸಾಯಿಯವರು ಹೀಗೆ ಹೇಳುತ್ತಾರೆ.

ಕಾಲಕ್ಕೆ ತಕ್ಕಂತೆ ಬೇಕು ಹೊಸ ಶೈಲಿ
ಹೊಸ ರಕ್ತವೂ ಹರಿಯುತಿರಬೇಕು ಮೈಲಿ
ಹಿಂದಿ-ಇಂಗ್ಲಿಷ್ ಶಬ್ದಗಳು ಜೊತೆಗೆ ಸೇರಿ
ಹೊಡೆಯುತಿರಬೇಕು ಕನ್ನಡದ ಜಯಭೇರಿ[12]

ಎಂದು ಹೊಸಗನ್ನಡದಲ್ಲಿ ಚುಟುಕು ಮುಂದುವರಿಯುತ್ತಿರುವ ಹಾದಿಯ ಬಗ್ಗೆ ಸ್ಪಷ್ಟತೆಯನ್ನು ದಿನಕರ ದೇಸಾಯಿಯವರು ನೀಡುತ್ತಾರೆ. ಆಧುನಿಕ ಚುಟುಕುಗಳ ಹಿನ್ನೆಲೆಯ ಬಗ್ಗೆ ಅನೇಕ ವಿದ್ವಾಂಸರು ನಿರ್ದೇಶಕವನ್ನು ನೀಡುತ್ತಾರೆ. "ಶತಮಾನದ ಕನ್ನಡ ಸಾಹಿತ್ಯ" ಎಂಬ ಕೃತಿಯಲ್ಲಿ ಜಿ. ಎಚ್. ನಾಯಕರವ ರು "ಆಧುನಿಕ ಚುಟುಕುಗಳ ಹಿನ್ನೆಲೆಯಲ್ಲಿ ಎರಡು ನಿರ್ದೇಶಕಗಳಿವೆ. ಒಂದು ಪಾಶ್ಚಾತ್ಯ ಮತ್ತು ಎರಡು; ಭಾರತೀಯ ಸಂಸ್ಕೃತ, ಪ್ರಾಕೃತ, ಹಳೆ-ನಡು ಕನ್ನಡ ಮತ್ತು ಜಾನಪದ. ಪಾಶ್ಚಾತ್ಯ ಸಾಹಿತ್ಯ ಸಂಪರ್ಕ ವೇ ನಮ್ಮ ಹೊಸ ಹುಟ್ಟಿಗೆ- ನವೋದಯಕ್ಕೆ ಪ್ರೇರಕವೂ ದರ್ಶಕವೂ ಆದಂತೆ ಭಾರತೀಯ ಪರಂಪರೆ ಗೂ ಶಕ್ತಿ ಸಾಮರ್ಥ್ಯವನ್ನು ಒದಗಿಸಿದೆ. ಅಂದರೆ "ಚುಟುಕು" ಈ ಎಲ್ಲ ನೀರು ಗೊಬ್ಬರವುಂಡು ತನ್ನದೇ ರೀತಿಯಲ್ಲಿ ಬೆಳೆದಿದೆ. ಮುಂದಿನ ಬೆಳವಣಿಗೆಯಲ್ಲಿ ಈ ಎರಡೂ ಗುರುತುಗಳು ನಿಚ್ಚಳವಾಗಿದೆ. ಪ್ರಾರಂಭದ ಈ ಕೊಡುಕೊಳ್ಳುಕೆಯನ್ನು ಉಪಯೋಗಿಸಿ ಕೊಂಡು ನವನವೀನವಾಗಿ

10 ದಿನಕರ ದೇಸಾಯಿಯವರ ಆಯ್ದ ಕವಿತೆಗಳು- ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 193
11 ದಿನಕರ ದೇಸಾಯಿಯವರ ಆಯ್ದ ಕವಿತೆಗಳು- ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 217
12 ದಿನಕರ ದೇಸಾಯಿಯವರ ಆಯ್ದ ಕವಿತೆಗಳು- ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 215

ಬೆಳೆದಿದೆ'*[13] ಜಿ.ಎಚ್.ನಾಯಕರ ಈ ಮಾತುಗಳು ಹೊಸಗನ್ನಡ ಚುಟುಕು ಹೇಗೆ ಬೆಳೆದು ಬಂತು ಎಂಬ ಪ್ರಶ್ನೆಗೆ ಸಮರ್ಥ ಉತ್ತರವನ್ನು ಒದಗಿಸುತ್ತದೆ. ಯಾಕೆಂದರೆ ಹೊಸಗನ್ನಡದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವ ವು ಬಹಳಷ್ಟು ಇರುವುದನ್ನು ಕಾಣುತ್ತೇವೆ. ಅದರ ಜೊತೆಗೆ ಹಿಂದಿನ ಪರಂಪರೆಯ ಹಾದಿಯನ್ನು ಗಮನಿಸಿ ಆ ಹಾದಿಗಿಂತ ತುಸು ಭಿನ್ನವಾದ ಕಾವ್ಯವನ್ನು ಸೃಷ್ಟಿಸಿರುವುದನ್ನು ಕಾಣುತ್ತೇವೆ. ಹೇಗೆ ಚಂಪೂವಿನಿಂದ ಸ್ವತಂತ್ರ ಹೊಂದಿ ರಗಳೆ, ವಚನ, ಷಟ್ಪದಿ, ಮೊದಲಾದ ಕಾವ್ಯ ಪ್ರಕಾರ ಹುಟ್ಟಿ ಕೊಡಿತ್ತೋ ಅದೇ ಮಾದರಿಯಲ್ಲಿ ಚುಟುಕು ಕೂಡ ಸರಳ ರೀತಿಯಲ್ಲಿ ಕೇವಲ ಸಾಲುಗಳ ಮೂಲಕ ಜನರ ಆಗುಹೋಗುಗಳನ್ನೇ ವಸ್ತು ವಿಷಯವನ್ನಾಗಿ ಮಾಡಿಕೊಂಡು ಮುನ್ನಡೆಯುತ್ತಿದೆ.

1940ರಲ್ಲಿ ಜಿ.ಪಿ.ರಾಜರತ್ನಂರವರು ರಚಿಸಿದ "ನೂರು ಪುಟಾಣಿ" ಕೃತಿಯು ಮುಕ್ತಕ ಸಂಕಲನವಾದರೂ ಅವರು ಪ್ರಕಟಿಸಿರುವಂತಹ ಈ ಕೃತಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚುಟುಕು ಸಾಹಿತ್ಯ ಬೆಳೆಯಲು ಕಾರಣ ವಾಯಿತು. ಈ ಕೃತಿಯು ಚುಟುಕು ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ಗುರುತಿಸಲ್ಪಡುತ್ತದೆ. ಹಾಗಿದ್ದರೆ ಜಿ.ಪಿ.ರಾಜರತ್ನಂರವರು ಯಾವುದನ್ನು ಚುಟುಕು ಎಂದು ಕರೆದರು?, ಅವರ ಪ್ರಕಾರ ಚುಟುಕು ಸಾಹಿತ್ಯದ ಸ್ವರೂಪ ಹೇಗೆ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡು ಕೊಳ್ಳುತ್ತಾರೆ ಎಂದರೆ; ಅವರು ಇಂಗ್ಲಿಷ್‌ನ "ಲಿಮಿರಿಕ್" ಎನ್ನುವ ಪದ್ಯಗಳನ್ನು ಹೋಲುವಂತಹ ಪದ್ಯಗಳನ್ನು ಬರೆದು ಅವುಗಳನ್ನು "ಚುಟುಕ" ಗಳೆಂದು ಕರೆದರು. ಈ ಮಾತುಗಳನ್ನು ಡಾ.ಮಂಜಪ್ಪ ಶೆಟ್ಟಿಯವರು ಸಂಶೋಧನಾ ಪ್ರಬಂಧದಲ್ಲಿ ದಾಖಲಾಗಿರುವುದನ್ನು ಕಾಣಬಹುದು.

ಪಾಶ್ಚಾತ್ಯ ಸಾಹಿತ್ಯವು ಹೊಸಗನ್ನಡದ ಮೇಲೆ ಪ್ರಭಾವವನ್ನು ಬೀರಿ ನವೀನವಾದ ಕಾವ್ಯವೊಂದು ರೂಪುಗೊಳ್ಳಲು ಸಾಧ್ಯವಾದುದು, ಅದು ಪಾಶ್ಚಾತ್ಯ ನಿರ್ದೇಶಕಗಳಾಗಿವೆ. ಈ ನಿರ್ದೇಶಕಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಲಿಮರಿಕ್ಸ್ ಕೂಡ ಚುಟುಕುಗಳ ಮೇಲೆ ಪ್ರಭಾವವನ್ನು ಬೀರಿತು. ಇವುಗಳ ಬಗ್ಗೆ ಅನೇಕ ವಿದ್ವಾಂಸರು ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಪ್ರೊ:ಎಸ್.ಅನಂತ ನಾರಾಯಣರವರು ತಮ್ಮ "ಹೊಸಗನ್ನಡ ಕವಿತೆಯ ಮೇಲೆ ಪಾಶ್ಚಾತ್ಯ ಕಾವ್ಯದ ಪ್ರಭಾವ" ಎಂಬ ಗ್ರಂಥದಲ್ಲಿ "ಲಿಮಿರಿಕ್ ಎಂಬ ಜಾತಿಯ ಪದ್ಯ ಇಂಗ್ಲಿಷ್‌ನದ್ದಾಗಿದ್ದು ಇಂತಹ ಪದ್ಯಗಳನ್ನು ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ ಬರೆದ ಜಿ.ಪಿ.ರಾಜರತ್ನಂ ಅವರು ಅವುಗಳಿಗೆ "ಚುಟುಕು" ಎಂಬ ಹೆಸರನ್ನು ಕೊಟ್ಟಿದ್ದಾರೆ" ಎಂಬುವುದಾಗಿ ಅಭಿಪ್ರಾಯವನ್ನು ಪಡೆಯುತ್ತಾರೆ. ಡಾ.ಎಂ.ಅಕಬರ್ ಆಲಿಯವರು ಕೂಡ ತಮ್ಮ "ಅಕಬರ ಅಲಿ ಚುಟುಕು ಗಳು" ಎಂಬ ಕೃತಿಯ ನಿವೇದನೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಮೊದಲ ಚುಟುಕು ಸಂಕಲನವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜಿ.ಪಿ.ರಾಜರತ್ನಂ ಕೃತಿಯು ಯಾವ ರೀತಿಯಿಂದ ಮೂಡಿ ಬಂದಿದೆ ಎಂಬ ವಿಚಾರಕ್ಕೆ ಜಿ.ಎಚ್.ನಾಯಕ್ ರವರು ತಮ್ಮ ಶತಮಾನದ ಕನ್ನಡ ಸಾಹಿತ್ಯ ಕೃತಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸುತ್ತಾರೆ. 'ರಾಜರತ್ನಂ ಅವರ "ನೂರು ಪುಟಾಣಿ" ಸಂಪೂರ್ಣವಾಗಿ ಸ್ವತಂತ್ರ ರಚನೆಯ ಪುಸ್ತಕವೇನಲ್ಲ. ಅದರಲ್ಲಿ ಸಂಸ್ಕೃತದಿಂದ ಅನುವಾದಗಳಿವೆ. ಹಾಗೆಯೇ ಹಿಂದಿನ ಕನ್ನಡ ಕೃತಿಗಳಿಂದ ಆಯ್ದ ಕೆಲವು ಮುಕ್ತಕಗಳಿವೆ. ಮತ್ತು ಅವರದ್ದೇ ಆದ ರಚನೆ ಯೂ ಸೇರಿದೆ. ಇದರಲ್ಲೇ ಲಿಮರಿಕ್‌ದಂತಹ ಐದು ಸಾಲಿನ ಚುಟುಕುಗಳಿವೆ' ಎಂಬ ಅಂಶಗಳನ್ನು ಗುರುತಿಸಿದ್ದಾರೆ. ಹಾಗಿದ್ದರೆ ಜಿ.ಪಿ.ರಾಜರತ್ನಂ ರವರ ಒಂದು ಚುಟುಕನ್ನು ಉದಾಹರಣೆ ನೀಡುವುದು ಯೋಗ್ಯವೆನಿಸುತ್ತದೆ.

ಒಂದು ಚಿಕ್ಕ ಹುಳು
ನುಂಗಲೈದು ಗಳು
ಅದರ ಸಿವುರು
ಬಾಯಿ ಕವರಿ

[13] ಶತಮಾನದ ಕನ್ನಡ ಸಾಹಿತ್ಯ ಪುಟ ಸಂಖ್ಯೆ 373

ಕಣ್ಣು ತುಂಬ ಅಳು

ಎಂಬ ಚುಟುಕನ್ನು ಗಮನಿಸಿದ್ದಾಗ ಲಿಮರಿಕ್‌ಗಳ ಸ್ವರೂಪವನ್ನು ಕಾಣಬಹುದು. ಲಿಮರಿಕ್‌ನ ಸ್ವರೂಪವು ಮೊದಲ ಎರಡು ಸಾಲು ಹಾಗೂ ಕೊನೆಯ ಸಾಲುಗಳು ಉದ್ದವಾಗಿದ್ದು ಅವುಗಳ ಅಂತ್ಯಾಕ್ಷರ ಪ್ರಾಸ ಆಗಿರುತ್ತದೆ. ಮೂರು ಮತ್ತು ನಾಲ್ಕನೇ ಸಾಲುಗಳು ಚಿಕ್ಕದಾಗಿದ್ದು ಅವುಗಳ ಅಂತ್ಯಕ್ಷರವೂ ಬೇರೊಂದು ಪ್ರಾಸವಿರುತ್ತದೆ. ಹೀಗೆಯೇ ಜಿ.ಪಿ.ರಾಜರತ್ನಂರವರು ಲಿಮರಿಕ್‌ನ ಪ್ರೇರಣೆಯನ್ನು ಪಡೆದಿದ್ದರೂ ಅವರು ಕೇವಲ ಲಿಮರಿಕ್‌ಗೆ ಮಾತ್ರ ಜೋತು ಬೀಳದೇ; ನಾಲ್ಕು ಸಾಲಿನ, ಆರು ಸಾಲಿನ ಹೀಗೆ ಬೇರೆ ಬೇರೆ ರೀತಿಯಲ್ಲಿ ಬರೆದಿದ್ದಾರೆ. ಚುಟುಕಿನಲ್ಲಿ ಭಾವನೆಗೆ ಪ್ರಕಟಣೆಗೆ ಬೇಕಾದ ಬಂಧವನ್ನು ಬಳಸಿಕೊಳ್ಳುವ ಸ್ವಾತಂತ್ರ್ಯದಿಂದ ಬರೆದಿದ್ದಾರೆ ಎಂಬ ಅಂಶವನ್ನು ಗುರುತಿಸಿಕೊಳ್ಳಬಹುದು.

**ಜನಪದ ಸಾಹಿತ್ಯದಲ್ಲಿ ಚುಟುಕು**

ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಅತೀ ಹೆಚ್ಚು ಮನ್ನಣೆ ಪಡೆದ ಚುಟುಕು ಸಾಹಿತ್ಯವು ಆಧುನಿಕ ಕನ್ನಡದಲ್ಲಿ ಒಂದು ಹೊಸ ಪ್ರಕಾರವಾಗಿ ಬೆಳೆದು ಬಂದಿದ್ದರೂ ಕೂಡ ಚುಟುಕಿನಲ್ಲಿ ಜನಪದ ಅಂಶಗಳು ಬೇರೂರಿ ಬಿಟ್ಟಿದೆ. ಚುಟುಕುಗಳಿಗೂ ಜನಪದಕ್ಕೂ ಇರುವ ಸಂಬಂದವೇನು? ಜನಪದ ಸಾಹಿತ್ಯದಿಂದಾಗಿ ಚುಟುಕು ಉಗಮಗೊಳ್ಳಲು ಪ್ರೇರಕವಾದ ಅಂಶಗಳು ಯಾವುವು? ಜನಪದ ಸಾಹಿತ್ಯದ ಪ್ರಭಾವ ಚುಟುಕುಗಳನ್ನು ಹೇಗೆ ವಿಶಿಷ್ಟ ಗೊಳಿಸಿದೆ. ಎಂಬಂತಹ ಅನೇಕ ಪ್ರಶ್ನೆಗಳನ್ನು ಹಾಕಿ ಅಧ್ಯಯನ ನಡೆಸಿದಾಗ ಅನೇಕ ವಿಚಾರಗಳು ಬೆಳಕಿಗೆ ಬರುತ್ತದೆ.

ಚುಟುಕು ಸಾಹಿತ್ಯದ ಮೂಲ ಜನಪದ ಎಂಬುದಾಗಿ ದೇಜಗೌ ರವರು ಅಭಿಪ್ರಾಯ ಪಡುತ್ತಾರೆ. "ಜನಪದರು ದುಡಿದು ದಣಿವಾರಿಸಿಕೊಳ್ಳುವಾಗ ಅವರ ನೋವು ನಲಿವಿನ ಸೃಜನಶೀಲ ಅಭಿವ್ಯಕ್ತಿಯಿಂದ ಚುಟುಕುಗಳು ಹುಟ್ಟಿ ಕೊಂಡವು. ನಮ್ಮ ಜನಪದರ ಶ್ರಮದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಚುಟುಕು ಸಾಹಿತ್ಯವನ್ನು ಕಾಯಕ ಸಾಹಿತ್ಯ ಎಂದರೆ ತಪ್ಪಾಗಲಾರದು. ವಚನಕಾರರ ವಚನಗಳೂ ಒಂದು ರೀತಿಯ ಚುಟುಕುಗಳಾಗಿವೆ. ಚುಟುಕುಗಳ ಬ್ರಹ್ಮ ದಿನಕರ ದೇಸಾಯಿ ಅವರು ಹೇಳುವಂತೆ, ಚುಟುಕು ಎಂಬುವುದು ಬೆಳಕಿನ ಬಿಂಬ ದೊಡ್ಡದಾದರೆ ಚಂದ್ರ,ಚಿಕ್ಕದಾದರೆ ಚುಕ್ಕಿ"[14] ಎಂಬ ಮಾತನ್ನು ಮೈಸೂರು ಜಿಲ್ಲಾ ಚುಟುಕು ಸಾಹಿತಿಗಳ ಸಮ್ಮಿಲನ–2011ರಲ್ಲಿ ನುಡಿದಿರುವ ಶೈಲಿಯು ಜನಪದವೇ ಚುಟುಕುಗಳ ಮೂಲ ಸ್ಥಾನ ಎಂಬ ನೆಲೆಯನ್ನು ಕಾಯ್ದಿರಿಸುತ್ತದೆ.

"ಚುಟುಕುಗಳ ಒಳ ಅರ್ಥದ ಚಿಟಿಕೆ ಹಾರಿಸಿ" ಎಂಬ ಲೇಖನದಲ್ಲಿ ಗಿರಿಜಾ ಮಾಲಿ ಪಾಟೀಲರವರು ಚುಟುಕಿಗೂ ಜನಪದಕ್ಕೂ ಅವಿನಾಭಾವ ಸಂಬಂಧವಿದೆ ಎಂಬುವುದನ್ನು ತಿಳಿಸುತ್ತಾರೆ. "ಚುಟುಕು ಸಾಹಿತ್ಯ ಇದೊಂದು ಆಧುನಿಕ ಕಾವ್ಯ ಪ್ರಕಾರ ಎಂದು ಹೇಳುವುದು ಕಷ್ಟದ ಸಂಗತಿ. ಜಾನಪದ ಸಾಹಿತ್ಯ ಪ್ರಕಾರವು ಇದಾಗಿರುವುದು ಇದರ ವಿಶಿಷ್ಟತೆಗೆ ಸಾಕ್ಷಿ. ಚುಟುಕು ಎಂದರೆ ಅನುಭವಸ್ಥರು ಮಾತನಾಡುವ ಗಾದೆ, ನಾಣ್ಣುಡಿಗಳು ಇದೆ ಪ್ರಕಾರಕ್ಕೆ ಸೇರುತ್ತವೆ. ಇವು ಕೆಲಕಾಲ ಕೇಳುವುಗರನ್ನು ಓದುಗರನ್ನು ಚಿಂತನೆಗೆ ಹಚ್ಚುತ್ತದೆ. ವ್ಯವಸ್ಥೆಯನ್ನು ಸರಿ ದಾರಿಗೆ ತರುವುದು, ವ್ಯಂಗ್ಯವಾಗಿ ವಿಮರ್ಶಿಸುವ ಹಾಸ್ಯದ ಹೊನಲಿನ ಮೂಲಕ ಮುಜುಗರದ ಸನ್ನಿವೇಶವನ್ನು ತಿಳಿಯಾಗಿಸುವುದು ಆದರೂ ಚುಟುಕು ರಚನೆಗೆ ಜಾನಪದವೇ ಮೂಲ ಎನ್ನುವುದು ಹಲವರ ಅಭಿಮತ"[15] ಎಂಬುವುದಾಗಿ ಚುಟುಕಿಗೂ ಜಾನಪದಕ್ಕೂ ಇರುವ ಸಂಬಂಧವನ್ನು ತಿಳಿಸುತ್ತಾರೆ.

"ಹನಿಗವನಗಳ ಹೆಜ್ಜೆ ಹಿಡಿದು" ಎಂಬ ಲೇಖನದಲ್ಲಿ ಕೇಶವ ಕುಲಕರ್ಣಿಯವರು ಹನಿಗವನಗಳು ಹಾಗೂ ಚುಟುಕುಗಳು ಒಂದೇ ಸ್ವರೂಪದವುಗಳೆಂದು ಅಭಿಪ್ರಾಯ ಪಟ್ಟು; "ಕನ್ನಡದಲ್ಲಿ ಚುಟುಕುಗಳ ಉಗಮ ಮಕ್ಕಳನ್ನು ಆಡಿಸುವ ಮಾತೆಯರ

[14] ಪ್ರಜಾವಾಣಿ–21/03/2011–ಚುಟುಕು ಸಾಹಿತ್ಯಾದ ಮೂಲ ಜನಪದ(ಲೇಖನ)

[15] ಶ್ರಾವಣಜೀವ ಭಾವಗಳ ಸಮ್ಮಿಲನ– ಗಿರಿಜಾ ಮಾಲಿ ಪಾಟೀಲರ (ಲೇಖನ) 01/03/2021

ಮಾತುಗಳಿಂದಲೇ ಎನ್ನುವುದರಲ್ಲಿ ನನಗಂತೂ ಸಂಶಯವಿಲ್ಲ" ಎಂಬುವು ದಾಗಿ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಈ ಅಭಿಪ್ರಾದೊಂದಿಗೆ ಅವರು ಅದನ್ನು ಸಮರ್ಥಿಸಲು ಕನ್ನಡ ನಾಡಿನಲ್ಲಿ ಜನಪ್ರಿಯವಾಗಿರುವ ಜನಪದ ಸಾಹಿತ್ಯದ ಕಿರುಗವನವನ್ನು ಉದಾಹರಿಸುತ್ತಾರೆ.

ಆನಿ ಬಂತೊಂದಾನಿ

ಇದ್ದಾ ಊರ ಆನಿ

ಬಿಜಾಪುರದ ಆನಿ

ಇಲ್ಲಿ ಗ್ಯಾಕ ಬಂತು

ಹಾದಿ ತಪ್ಪಿ ಬಂತು

ಹಾಡಿಗೊಂದು ದುಡ್ಡು

ಬೀದಿಗೊಂದು ದುಡ್ಡು [16]

ಎಂದು ಮಗುವನ್ನು ತೊಡೆಯ ನಡುವೆ ಮಲಗಿಸಿಕ್ಕೊಂಡು ತಾಯಿಯು ಮಗುವನ್ನು ಖುಷಿ ಪಡಿಸುವ, ಸಂತೋಷ ಪಡಿಸುವ, ನಿದ್ರೆ ಮಾಡಲೆಂದು ಲಾಲಿ ಹಾಡುವ ಈ ಪುಟ್ಟ ಹಾಡುಗಳು ಕನ್ನಡ ಜಾನಪದ ಸಾಹಿತ್ಯದಿಂದ ಚುಟುಕು ಸಾಹಿತ್ಯಕ್ಕೆ ಪ್ರೇರಣೆ ದೊರೆಯಿತು. ಮಾತ್ರವಲ್ಲದೇ ಚುಟುಕಿನ ಹಿಂದೆ ಮಹಿಳೆಯರ ಪಾತ್ರವು ಇದೆ ಎಂಬುವುದಾಗಿ ಅಭಿಪ್ರಾಯ ಪಡುತ್ತಾರೆ.

ಕನ್ನಡ ಸಿರಿಯ ನಾಲೆಗಳು ಎಂಬ ಕೃತಿಯಲ್ಲಿ ಡಾ.ಎಸ್.ಅನಸೂಯ ಕೆಂಪನಹಳ್ಳಿಯವರು ಚುಟುಕುವಿನ ರಚನೆಯನ್ನು ಜಾನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಎಂಬ ಮಾತನ್ನು ಉಲ್ಲೇಖಿಸಿ ಅದನ್ನು ಸಮರ್ಥಿಸುವ ಕಾರ್ಯವನ್ನು ಮಾಡಿದ್ದಾರೆ. "ಒಂದು ಸಾಹಿತ್ಯ ಪ್ರಕಾರವಾಗಿ ಜನಪದ ಪದ್ಯಗಳಿಗೆ ಇರುವ ಸಾಮರ್ಥ್ಯ ಮತ್ತು ಸಾಧ್ಯತೆಗಳು ಹಲವು ರೀತಿಯದ್ದು, ಇವು ನಮ್ಮ ಸಂಸ್ಕೃತಿಯ ಮೂಲ ಬೇರು  ಗಳಾಗಿದ್ದು ಸಮಾಜದ ಪ್ರತಿಬಿಂಬವಾಗಿದೆ. ಮನುಷ್ಯ–ಮನುಷ್ಯನ ಸಂಬಂಧಗಳನ್ನು ತಿಳಿಸಲು, ಮನುಷ್ಯನ ಬದುಕಿನ ವೈವಿಧ್ಯಮಯ ವಾದ ಅನುಭವಗಳನ್ನು ದಾಖಲಿಸಲು, ಮನರಂಜನೆಗಾಗಿ ನೀತಿ ಭೋಧನೆ ಗಾಗಿ, ನ್ಯಾಯ ನಿರ್ಣಯಕ್ಕಾಗಿ, ತಮ್ಮ ಪರಂಪರೆಯ ದಾಖಲಿಕರಣಕ್ಕಾಗಿ ಹೀಗೆ ಮುಖ್ಯ ಆಕರಗಳಾಗುತ್ತವೆ. ಹೀಗಾಗಿ ಇಲ್ಲಿ ಜನಪದರ ಬದುಕಿನ ವೈವಿಧ್ಯಮಯ ಮಾದರಿಗಳು, ಮನುಷ್ಯನ ಒಳ–ಹೊರ ವ್ಯಕ್ತಿತ್ವ ಮತ್ತು ಸ್ವಭಾವದ ವಿಪುಲ ಚಿತ್ರಗಳು ಸಿಗುತ್ತವೆ. ಜನಪದ ಸಮಾಜದಲ್ಲಿ ಹೆಣ್ಣು ಮತ್ತು ಗಂಡಿನ ಸಮಗ್ರ ಸ್ವರೂಪದ ಮಾದರಿಯೊಂದನ್ನು ಕಾಣಲು ಈ ಪದ್ಯಗಳು ಉತ್ತಮ ಆಕಾರಗಳಾಗುತ್ತವೆ. ಇವು ನಮ್ಮ ಜೀವನದ ಭುವನದ ಭಾಗ್ಯವೆನ್ನಿಸುವಷ್ಟರ ಮಟ್ಟಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ. ಅವುಜನಪದರ ಬಾಳಿನ ವಿಶ್ವಕೋಶಗಳಾಗಿವೆ"[17] ಎಂಬುವುದಾಗಿ ಚುಟುಕು ರಚನೆಯನ್ನು ಜಾನಪದ ಸಾಹಿತ್ಯದಲ್ಲಿ ಕಂಡು ಕೊಂಡ ಬಗೆಯನ್ನು ವಿವರಿದಿದ್ದಾರೆ.

ಹೀಗೆ ವಿದ್ವಾಂಸರ ಮಾತುಗಳನ್ನು ಗಮನಿಸುತಾ ್ತ ಹೋದಂತೆ ಜಾನಪದ ಸಾಹಿತ್ಯಕ್ಕೂ ನಮ್ಮ ಚುಟುಕಿಗೂ ಇರುವ ನೈಜ ಸಂಬಂಧವು ಅವರಿವಿಗೆ ಬರುತ್ತದೆ. ಒಂದು ಭಾಷೆಯಲ್ಲಿ ಲಿಪಿ ಹುಟ್ಟಿ ಕೊಳ್ಳುವುದಕ್ಕಿಂತ ಮೊದಲೇ ಪ್ರಚಲಿತಕ್ಕೆ ಬಂದವುಗಳೇ ಈ ಜಾನಪದಗಳು. ಇವು ಮೌಖಿಕವಾಗಿ ಬೆಳೆದು ಬಂದರೂ ಸಹ ಶಿಷ್ಟ ಸಾಹಿತ್ಯಕ್ಕೆ ಪ್ರೇರಣೆ ನೀಡುವಲ್ಲಿ ಯಶಸ್ವಿಯಾಗಿದೆ.

ಡಾ.ಎನ್. ಆರ್. ನಾಯಕರು ಕೂಡ ಜನಪದ ಸಾಹಿತ್ಯವು ಚುಟುಕು ಸಾಹಿತ್ಯಕ್ಕೆ ಪ್ರೇರಣೆ ಎಂಬ ಅಂಶವನ್ನು ಉಲ್ಲೇಖಿಸಿದ್ದಾರೆ.

[16] ಅನಿವಾಸಿ–ಯು.ಕೆ.ಕನ್ನಡಿಗರ ತಂಗುದಾಣ – ಹನಿಗವನಗಳ ಹೆಜ್ಜೆ ಹಿಡಿದು (ಲೇಖನ) ಕೇಶವ ಕುಲಕರ್ಣಿ

[17] ಕನ್ನಡ ಸಿರಿಯ ನಾಲೆಗಳು– ಡಾ.ಎಸ್.ಅನಸೂಯ ಕೆಂಪನಹಳ್ಳಿ–99

"ಜನಪದ ಸಾಹಿತ್ಯದ ನೆಲೆಯ ಮೂಲ ಎಷ್ಟು ಪ್ರಾಚೀನವೋ! ಆದರೆ ನಮಗೆ ಲಭ್ಯವಾಗಿರುವ ಮತ್ತು ಆಗುತ್ತಲೇ ಇರುವ ಜನಪದ ಗೀತಗಳಂತೂ ಅಪ್ಪಟವಾಗಿ ಈ ಶತಮಾನದ್ದೆ. ಕಲಿತವರ ಕಾವ್ಯ ಒಂದು ಹಂತದಲ್ಲಿ ರಚಿತ ವಾಗುತ್ತಲೇ ಹೋಗುತ್ತಿದ್ದಂತೆ ಅಕ್ಷರ ಅರಿಯದ ಶ್ರಮಿಕರ ಕಾವ್ಯವಾಗಿ ಜನಪದ ಕಾವ್ಯ ಉತ್ಪನ್ನವಾಗಿದೆ. ಅದರಲ್ಲೂ ಹೆಂಗಸರ ಹಾಡುಗಳು, ತ್ರಿಪದಿಗಳು ಅದ್ಭುತವಾದ ಅಭಿವ್ಯಕ್ತಿಯಾಗಿದೆ. ಹೊಸಗನ್ನಡ ಕಾವ್ಯದ ಲಯಕ್ಕೆ ಜನಪದ ಕಾವ್ಯದ ಲಯ ಸಂಚಾರ ಮಹತ್ತರವಾದ ಕೊಡುಗೆಯನ್ನು ಕೊಟ್ಟಿದೆ. ಜನಪದ ಕಾವ್ಯ ಬತ್ತದ ನದಿಯಾಗಿ ಹರಿದದ್ದು. ಇದು ಅವಿನಾಶಿ ಅಜರಾಮರ" ಎಂಬುವುದಾಗಿ ಜನಪದ ಸಾಹಿತ್ಯದ ಹಿರಿಮೆಯನ್ನು ಸಾರುತ್ತಾ ಚುಟುಕಿನ ಮೂಲಕ್ಕೆ ಜನಪದ ಕಾರಣ ಎಂಬ ಹೇಳಿಕೆಗೆ ಪೂರಕವಾಗಿದೆ ಅವರ ಮಾತಿನ ಶೈಲಿ.

ಹೀಗೆ ನಮ್ಮ ಆಧುನಿಕ ಕನ್ನಡದಲ್ಲಿ ಜನಪ್ರಿಯತೆಯನ್ನು ಗಳಿಸಿ ಕೊಂಡಿರುವ ಚುಟುಕುಗಳು ಜನಪದದ ಹಿನ್ನಲೆಯನ್ನು ವಚನ–ಕೀರ್ತನೆ–ತ್ರಿಪದಿ ಪ್ರಭಾವವನ್ನು ಹಾಗೂ ಇಂಗ್ಲೀಷ್ ಸಾಹಿತ್ಯದ ಸತ್ವವನ್ನು ಪಡೆದುಕೊಂಡು ಸಂಮೃದ್ಧಿಯಾಗಿ ಹೊಸಗನ್ನಡ ಸಾಹಿತ್ಯದಲ್ಲಿ ನವೇನ ರೀತಿಯಲ್ಲಿ ಬೆಳವಣಿಗೆಯನ್ನು ಕಾಣುತ್ತಿದೆ. ಹೀಗಿದ್ದರೂ ಈ ಚುಟುಕು ಸಾಹಿತ್ಯದ ಬಗೆಗೆ ವಿದ್ವಾಂಸರು ನೀಡುತ್ತಿರುವ ಪ್ರಾಮುಖ್ಯತೆಯು ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಚುಟುಕು ಸಾಹಿತ್ಯಕ್ಕೆ ಇತತರ ಕನ್ನಡ ಪ್ರಕಾರಗಳಂತೆ ಮನ್ನಣೆ ಲಭಿಸುತ್ತದರೆ ಚುಟುಕು ಸಾಹಿತ್ಯ ಇನ್ನಷ್ಟು ಅಭಿವೃದ್ಧಿಯನ್ನು ಕಾಣಬಹುದು.

**ಪರಾಮರ್ಶನ ಗ್ರಂಥ**

1. ಅನಿವಾಸಿ– ಯು.ಕೆ ಕನ್ನಡಿಗರ ತಂಗುದಾಣ– ಹನಿಗವನಗಳ ಹೆಜ್ಜೆ ಹಿಡಿದು (ಲೇಖನ)– ಕೇಶವ ಕುಲಕರ್ಣಿ
2. ಕನ್ನಡ ಸಿರಿಯ ನಾಲೆಗಳು– ಡಾ.ಎಸ್.ಅನಸೂಯ ಕೆಂಪನಹಳ್ಳಿ
3. ದಿನಕರ ದೇಸಾಯಿಯವರ ಆಯ್ದ ಕವಿತೆಗಳು– ವಿಷ್ಣುನಾಯ್ಕ (ಸಂಪಾದಕರು) ಪುಟಸಂಖ್ಯೆ 212
4. ಪ್ರಜಾವಣಿ–21/03/2011–ಚುಟುಕು ಸಾಹಿತ್ಯಾದ ಮೂಲ ಜನಪದ(ಲೇಖನ)
5. ಹನಿಗವನ ಏನು? ಏಕೆ? ಏಕೆ?– ಎಚ್. ಡುಂಡಿರಾಜ್ ಪುಟಸಂಖ್ಯೆ–21
6. ಶತಮಾನದ ಕನ್ನಡ ಸಾಹಿತ್ಯ ಪುಟ ಸಂಖ್ಯೆ 373
7. ಶ್ರಾವಣಜೀವ ಭಾವಗಳ ಸಮ್ಮಿಲನ– ಗಿರಿಜಾ ಮಾಲಿ ಪಾಟೀಲರ (ಲೇಖನ) 01/03/2021